ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
[ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.]
ಅಧೀಕ್ಷಕ ಇಂಜನೀಯರ(ವಿ), ರವರ ಕಛೇರಿ,
ರಿ.ಸ.ನಂ : 85ಬ, ಬಿ.ಇ.ಓ/ ಹಾವೇರಿ ನಗರಾಭಿವೃದ್ಧಿ ಪ್ರಾಧಿಕಾರಿ ಆಫೀಸ್ ಹತ್ತಿರ,
ಹಂಚಿನಾಳ ಲೇಔಟ್, ಪೂ.ಬಿಂ. ರಸ್ತೆ, ಹಾವೇರಿ – 581110.

HUBLI ELECTRICITY SUPPLY COMPANY LIMITED
[Wholly owned Govt. of Karnataka undertaking]
O/ O Superintending Engineer(Ele),
Reg No : 85B, Near B.E.O/ Haveri Urban Development Authority Office,
Hanchinal Layout, P.B. Road, Haveri-581110.

TelephoneNo. : 08375-232632
Fax No: : 08375-232625

Web Site : www.hescom.karnataka.gov.in
E-mail ID : seehvr.hescom@gmail.com
: dcahaveri@yahoo.com

Corporate Identity (CIN) : U31401KA2002SGC030437.

# ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆ

# ಹು.ವಿ.ಸ.ಕಂ.ನಿ, ಹಾವೇರಿ.

**ಹಾಜರಿದ್ದವರು,**

1] ಶ್ರೀ. ನಾಗಪ್ಪ. ಎಸ್. ಹೆಚ್. ಅಧೀಕ್ಷಕ ಇಂಜಿನೀಯರ(ವಿ) ಹಾಗೂ ಅಧ್ಯಕ್ಷರು.
2] ಶ್ರೀಮತಿ. ರೇಣುಕಾ. ಎಲ್. ತೆಂಬದ, ಸದಸ್ಯರು.
3] ಶ್ರೀ.ಗುರುಬಸಪ್ಪ. ಎಸ್. ಮಾಗಾವಿ, ಸದಸ್ಯರು.

**ಪ್ರಕರಣ ಸಂಖ್ಯೆ : 02.**

**ಶ್ರೀ. ಶಿವಯೋಗಿ. ವಿ. ಕೆರೂಡಿ, ಕೆರೂಡಿ ಕಾಂಪ್ಲೆಕ್ಸ್,
ಅಶೋಕ ವೃತ್ತ, ರಾಣೇಬೆನ್ನೂರ, ತಾ|| ರಾಣೇಬೆನ್ನೂರ,
ಜಿ|| ಹಾವೇರಿ, ಪಿನ್ ಕೋಡ್ : 581115.** -------- ದೂರುದಾರರು.

**ವಿರುದ್ಧ,**

**ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ),
ಕಾರ್ಯ & ಪಾಲನಾ ಉಪ-ವಿಭಾಗ-1, ಹೆಸ್ಕಾಂ,
ರಾಣೇಬೆನ್ನೂರ.** --------- ಪ್ರತಿವಾದಿ.

1. **ಪ್ರಕರಣದ ಸಾರಾಂಶ ಕೆಳಗಿನಂತಿರುತ್ತದೆ :-**

I. ಅರ್ಜಿದಾರರಾದ ಶ್ರೀ. ಶಿವಯೋಗಿ. ವಿ. ಕೆರೂಡಿ, ಕೆರೂಡಿ ಕಾಂಪ್ಲೇಕ್ಸ್, ಅಶೋಕ ವೃತ್ತ, ರಾಣೇಬೆನ್ನೂರ ಇವರು ಕರ್ನಾಟಕ ವಿದ್ಯುತ್ ನಿಯಂತ್ರಣಾ ಆಯೋಗ [ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆ ಮತ್ತು ಓಂಬುಡ್ಸಮನ್] ನಿಯಮಗಳು-2004 ಮತ್ತು ತಿದ್ದುಪಡಿ ಆದೇಶ ಸಂಖ್ಯೆ : ಡಿ/ 37/ 03, ದಿನಾಂಕ : 10.05.2013 ರಡಿಯಲ್ಲಿ ಒದಗಿಸಲಾದ ಅವಕಾಶದಡಿಯಲ್ಲಿ ದೂರನ್ನು ದಾಖಲಿಸಿ ದಿನಾಂಕ : 17.08.2022 ರಂದು ಗ್ರಾಹಕರ ಕುಂದು ಕೊರತೆ ನಿವಾರಣಾ [ಸಿ.ಜಿ.ಆರ್.ಎಫ್] ವೇದಿಕೆಗೆ ಅರ್ಜಿ ಸಲ್ಲಿಸಿರುವರು. ಡಾ || ವ್ಹಿ. ಎಮ್. ಕೆರೂಡಿ ಇವರು ಗ್ರಾಹಕರ ಪರವಾಗಿ ಪ್ರತಿನಿಧಿಯಾಗಿರುವರು.

II. ಅರ್ಜಿದಾರರು ಶ್ರೀ. ಶಿವಯೋಗಿ. ವಿ. ಕೆರೂಡಿ ಇವರ ನೆಲ ಮಹಡಿ ಕಟ್ಟಡ ಹಾಲಿ ಇರುವ ಆರ್.ಆರ್. ಸಂಖ್ಯೆ : 8650 ವಿದ್ಯುತ್ ಮಂಜೂರಾತಿಗೊಂಡ ದಿನಾಂಕ : 15.04.1991 ರಂದು 4 ಕಿ.ವ್ಯಾ ಭಾರಕ್ಕೆ ಆಗಿನ ಚಾಲ್ತಿಯಲ್ಲಿ ಇರುವ ನಿಯಮಾವಳಿಗಳ ಪ್ರಕಾರ ವಿದ್ಯುತ್ ಮಂಜೂರಾತಿಯನ್ನು ನೀಡಲಾಗಿತ್ತು. ದಿನಾಂಕ : 28.01.2004 ರಲ್ಲಿ ಸದರಿ ಸ್ಥಾವರಕ್ಕೆ ಹೆಚ್ಚುವರಿಯಾಗಿ 6 ಕಿ.ವ್ಯಾ ಭಾರಕ್ಕೆ ಆಗಿನ ಚಾಲ್ತಿಯಲ್ಲಿ ಇರುವ ನಿಯಮಾವಳಿಗಳ ಪ್ರಕಾರ ವಿದ್ಯುತ್ ಮಂಜೂರಾತಿಯನ್ನು ಪಡೆದು, ನಂತರ ದಿನಾಂಕ : 08.01.2021 ರಂದು 4 ಕಿ.ವ್ಯಾಗೆ ಸಿಮಿತಗೊಳಿಸಲಾಗಿತ್ತು. ಸದರಿ ಸ್ಥಾವರಕ್ಕೆ ಹೆಚ್ಚುವರಿಯಾಗಿ 16 ಕಿ.ವ್ಯಾ ವಿದ್ಯುತ್ ಪೂರೈಸಲು ದಿನಾಂಕ : 28.02.2022, 14.03.2022 ಮತ್ತು 23.03.2022 ರಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾರ್ಯ & ಪಾಲನಾ ಉಪ-ವಿಭಾಗ-1, ಹೆಸ್ಕಾಂ, ರಾಣೇಬೆನ್ನೂರ ರವರಿಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

III. ಕಂಪನಿಯ ನಿಯಮಾನುಸಾರ ಶ್ರೀ. ಶಿವಯೋಗಿ. ವಿ. ಕೆರೂಡಿ ಇವರ ಸ್ಥಾವರಕ್ಕೆ 4+16 ಕಿ.ವ್ಯಾ ವಿದ್ಯುತ್ ಪೂರೈಸುವಲ್ಲಿ ಕಟ್ಟಡದಲ್ಲಿರುವ ಎಲ್ಲ ಸ್ಥಾವರಗಳನ್ನು ಒಗ್ಗೂಡಿಸಿ ವಿದ್ಯುತ್ ಭಾರವನ್ನು ಪರಿಗಣಿಸಿ ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾರ್ಯ & ಪಾಲನಾ ಉಪ-ವಿಭಾಗ-1, ಹೆಸ್ಕಾಂ, ರಾಣೇಬೆನ್ನೂರ ರವರ ಪತ್ರ ಸಂಖ್ಯೆ : 7276, ದಿನಾಂಕ : 18.02.2022 ರಂದು ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯಲ್ಲಿ ಇರುವ ಅಂಶಗಳನ್ನು ಪರಿಶೀಲಿಸಿದಾಗ ಹಾಲಿ ವಿದ್ಯುತ್ ಭಾರವನ್ನು 4.00 ಕಿ.ವ್ಯಾಗೆ ಹೆಚ್ಚುವರಿಯಾಗಿ 16 ಕಿ.ವ್ಯಾ ಒಟ್ಟು : 20.00 ಕಿ.ವ್ಯಾ ಭಾರಕ್ಕೆ ಹಾಲಿ ಇರುವ ನಿಶ್ಚಿತ ಭಾರಕ್ಕೆ [Specified] ಅನುಸಾರ ಕೆ.ಇ.ಆರ್.ಸಿ KERC [Recovery of Expenditure for Supply of Electricity] Regulation ರ ಪರಿಚ್ಛೇದ 3.1.5 ಹಾಗೂ 3.1.7 ಮತ್ತು 3.1.7 ಟಿಪ್ಪಣಿ 1 ಡಿ ರ ಪ್ರಕಾರ ಕ್ರಮ ಕೈಗೊಳ್ಳಲು ಹಾಗೂ ಬಹುಮಹಡಿ ಕಟ್ಟಡಕ್ಕೆ ಸಂಬಂಧಿಸಿದ ಚಾಲ್ತಿಯಲ್ಲಿರುವ ಕೆ.ಇ.ಆರ್.ಸಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಲು ಸೂಚಿಸಿ, ಈ ಕಛೇರಿಯ ಪತ್ರ ಸಂಖ್ಯೆ : 664-66, ದಿನಾಂಕ : 13.05.2022 ಅನುಮೋದನೆ ನೀಡಿ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾರ್ಯ & ಪಾಲನಾ ಉಪ-ವಿಭಾಗ-1, ಹೆಸ್ಕಾಂ, ರಾಣೇಬೆನ್ನೂರ ರವರಿಗೆ ಸಲ್ಲಿಸಲಾಗಿತ್ತು.

IV. ಈ ಕಛೇರಿಯ ಪತ್ರ ಸಂಖ್ಯೆ : 664-66, ದಿನಾಂಕ : 13.05.2022 ರ ಪತ್ರಕ್ಕೆ ಅನುಗುಣವಾಗಿ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾರ್ಯ & ಪಾಲನಾ ಉಪ-ವಿಭಾಗ-1, ಹೆಸ್ಕಾಂ, ರಾಣೇಬೆನ್ನೂರ ರವರು ದಿನಾಂಕ : 03.06.2022 ರ ಪತ್ರದಲ್ಲಿ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಎಷ್ಟು ಹಣ ಭರಣ ಮಾಡಿಸಿಕೊಳ್ಳಬೇಕೆಂದು ಮಾರ್ಗದರ್ಶನ ನೀಡಲು ಸಲ್ಲಿಸಿದ್ದು ಇರುತ್ತದೆ. ಈ ಕಛೇರಿಯ ಪತ್ರ ಸಂಖ್ಯೆ : 3288-91, ದಿನಾಂಕ : 27.07.2022 ರಲ್ಲಿ ಸೂಕ್ತವಾದ ಮಾರ್ಗದರ್ಶನವನ್ನು ನೀಡಿ ಕೂಡಲೇ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿತ್ತು.

V. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾರ್ಯ & ಪಾಲನಾ ಉಪ-ವಿಭಾಗ-1, ಹೆಸ್ಕಾಂ, ರಾಣೇಬೆನ್ನೂರ ರವರಿಗೆ ಈ ಪ್ರಕರಣಕ್ಕೆ ಕುರಿತಂತೆ ಸ್ಥಾವರ ಸಂಖ್ಯೆ : 8650 ಕೆಳಮಹಡಿಯಲ್ಲಿ ಇರುತ್ತದೆ. ಸದರಿ "ಡಿ" ಬ್ಲಾಕ್ ಮತ್ತು "ಇ" ಬ್ಲಾಕ್‌ಗೆ ಕಾಮನ್ ಸ್ಟೇರಕೇಸ್ ಇರುವುದರಿಂದ "ಇ" ಬ್ಲಾಕ್ ಹಾಗೂ ಸದರಿ ಸ್ಥಾವರ ಇರುವ "ಡಿ" ಬ್ಲಾಕ್‌ಗಳನ್ನು ಒಂದೆ ಮಹಡಿ ಎಂದು ಪರಿಗಣಿಸಿ, ಒಟ್ಟು ಗೂಡಿಸಿ ಒಟ್ಟು ವಿದ್ಯುತ್ ಭಾರ 45 ಕಿ.ವ್ಯಾ ಆಗಿರುತ್ತದೆ. ಹೆಚ್ಚುವರಿ ವಿದ್ಯುತ್ ಭಾರ 16 ಕಿ.ವ್ಯಾಗೆ ಕೆ.ಇ.ಆರ್.ಸಿ ಕಂಡಿಕೆಯ 3.1.7 ರ ಟಿಪ್ಪಣಿ 1 "ಡಿ" ಪ್ರಕಾರ, 50 ಕಿ.ವ್ಯಾ ವರೆಗಿನ ಹೆಚ್ಚುವರಿ ವಿದ್ಯುತ್ ಭಾರಕ್ಕೆ ಪ್ರತಿ ಕಿ.ವ್ಯಾಗೆ ರೂ.6,500=00 ರಂತೆ ಹಾಗೂ 50 ಕಿ.ವ್ಯಾ ಮೇಲಿನ ಹೆಚ್ಚುವರಿ ವಿದ್ಯುತ್ ಭಾರಕ್ಕೆ ಪ್ರತಿ ಕಿ.ವ್ಯಾಗೆ ರೂ.13,000=00 ರಂತೆ, ಅಭಿವೃದ್ಧಿ ಶುಲ್ಕ ಮತ್ತು ಜಿ.ಎಸ್.ಟಿ ರೂಗಳನ್ನು ಭರಣಮಾಡಿಕೊಳ್ಳುವುದು ಹಾಗೂ ನಿಯಮಾನುಸಾರ ಅಧಿಕ ಠೇವಣಿ ಹಾಗೂ ಮಾಪಕ ಠೇವಣಿಯನ್ನು ಪಾವತಿಸಿಕೊಂಡು ಕೂಡಲೇ ಕ್ರಮ ಜರುಗಿಸಲು ಈ ಕಛೇರಿಯ ಪತ್ರ ಸಂಖ್ಯೆ : 3288-91, ದಿನಾಂಕ : 27.07.2022 ರಲ್ಲಿ ಸೂಚಿಸಲಾಗಿತ್ತು.

VI. ಈ ಕಛೇರಿಯ ಪತ್ರ ಸಂಖ್ಯೆ : 3288-91, ದಿನಾಂಕ : 27.07.2022 ರ ಪತ್ರಕ್ಕೆ ಅನುಗುಣವಾಗಿ ಸದರಿ ಸ್ಥಾವರಕ್ಕೆ 16 ಕಿ.ವ್ಯಾ ಹೆಚ್ಚುವರಿ ವಿದ್ಯುತ್ ಭಾರಕ್ಕೆ ರೂ.2,07,090=00 ಗಳನ್ನು ಹೆಚ್ಚುವರಿ ಅಭಿವೃದ್ಧಿ ಶುಲ್ಕ ಭರಣ ಮಾಡತಕ್ಕದ್ದು ಮತ್ತು ರೂ.29,770=00 ಹೆಚ್ಚುವರಿ ಆರಂಭಿಕ ಭದ್ರತಾ ಠೇವಣಿಯನ್ನು, ರೂ.178=00 ಮೇಲ್ವಿಚಾರಣಾ ಶುಲ್ಕವನ್ನು & ರೂ.296=00 ಎಲ್.ಟಿ.ರೇಟಿಂಗ್ ಶುಲ್ಕವನ್ನು [ಜಿ.ಎಸ್.ಟಿ ಮೊತ್ತವನ್ನು ಸೇರಿಸಿ] ಭರಣ ಮಾಡತಕ್ಕದ್ದು. ಸದರಿ ಸ್ಥಾವರಕ್ಕೆ ಸಿ.ಟಿ ಬಾಕ್ಸ್ & ಎಂ. ಎಸ್. ಬಿಲ್ಡಿಂಗ್ ಹಾಗೂ ಕೆ.ಇ.ಆರ್.ಸಿ ನಿಯಮಗಳನ್ನು ಪಾಲಿಸಲು ಸೂಚಿಸಿ, ಸಹಾಕಯ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾರ್ಯ & ಪಾಲನಾ ಉಪ-ವಿಭಾಗ-1, ಹೆಸ್ಕಾಂ, ರಾಣೇಬೆನ್ನೂರ ರವರ ಪತ್ರ ಸಂಖ್ಯೆ : 2340-42, ದಿನಾಂಕ : 03.08.2022 ರ ಮೂಲಕ ಸದರಿ ಗ್ರಾಹಕರಿಗೆ ಕೋರಿಕೆ ಮೂಲಕ ತಿಳಿಸಿದ್ದು ಇರುತ್ತದೆ.

VII. ಗ್ರಾಹಕರ ಪರವಾಗಿ ಪ್ರತಿನಿಧಿಯಾಗಿರುವ ಡಾ ॥ ವ್ಹಿ. ಎಮ್. ಕೆರೂಡಿ ಇವರು ಇ. ಎಸ್ & ಡಿ ಕೋಡ್ 2000-2001 ರ ಪ್ರಕಾರ ಹಳೆ ಕಟ್ಟಡಕ್ಕೆ ಮತ್ತು ಹೊಸದಾಗಿ ನಿರ್ಮಿಸಿರುವ ಕಟ್ಟಡಕ್ಕೆ 9.08 ರ ಪ್ರಕಾರ ಪ್ರತ್ಯೇಕ ನಿಯಮಾವಳಿಗಳದ್ದು ಕೆ.ಇ.ಆರ್.ಸಿ ನಿಯಮಾವಳಿಯ ತಿದ್ದುಪಡಿಯಲ್ಲಿ ನಿಯಮ 9.08 ದಿನಾಂಕ : 29.11.2001 ರ ಪ್ರಕಾರ Note [b] ತಳಮಹಡಿ ದಿನಾಂಕ : 06.10.1995 ರಲ್ಲಿ ಮೊದಲು ಸರ್ವಿಸ ಆಗಿರುವುದರಿಂದ ಹಳೆ ನಿಯಮಾವಳಿಗಳ ಪ್ರಕಾರ ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆ.

## 2. <u>ಅರ್ಜಿದಾರರ ವಾದಗಳು</u> :-

ಗ್ರಾಹಕರ ಪರವಾಗಿ ಹಾಜರಿದ್ದ ಶ್ರೀ. ಡಾ ॥ ವ್ಹಿ. ಎಮ್. ಕೆರೂಡಿ ರವರು ವಿಚಾರಣೆಯ ದಿನ ತಮ್ಮ ವಾದವನ್ನು ಈ ಕೆಳಗಿನಂತೆ ಮಂಡಿಸಿರುತ್ತಾರೆ.

I. ಗ್ರಾಹಕರ ಪರವಾಗಿ ಪ್ರತಿನಿಧಿಯಾಗಿರುವ ಡಾ ॥ ವ್ಹಿ. ಎಮ್. ಕೆರೂಡಿ ಇವರು ಇ. ಎಸ್ & ಡಿ ಕೋಡ್ 2000-2001 ರ ಪ್ರಕಾರ ಹಳೆ ಕಟ್ಟಡಕ್ಕೆ ಮತ್ತು ಹೊಸದಾಗಿ ನಿರ್ಮಿಸಿರುವ ಕಟ್ಟಡಕ್ಕೆ 9.08 ರ ಪ್ರಕಾರ ಪ್ರತ್ಯೇಕ ನಿಯಮಾವಳಿಗಳದ್ದು ಕೆ.ಇ.ಆರ್.ಸಿ ನಿಯಮಾವಳಿಯ ತಿದ್ದುಪಡಿಯಲ್ಲಿ ನಿಯಮ 9.08 ದಿನಾಂಕ : 29.11.2001 ರ ಪ್ರಕಾರ Note [b] ತಳಮಹಡಿ ದಿನಾಂಕ : 06.10.1995 ರಲ್ಲಿ ಮೊದಲು ಸರ್ವಿಸ ಆಗಿರುವುದರಿಂದ ಹಳೆ ನಿಯಮಾವಳಿಗಳ ಪ್ರಕಾರ ಕ್ರಮ ಕೈಗೊಳ್ಳಲು ಸೂಚಿಸಿದರು. ಸದರಿ ನಿಯಮಾವಳಿಗಳು ಕಲಂ – 47 ರ ಪ್ರಕಾರ [Section 47 repeal and savings] ರದ್ದಾಗಿರುವುದಿಲ್ಲ ಎಂದು ತಮ್ಮ ವಾದವನ್ನು ಮಂಡಿಸಿದರು ಹಾಗೂ ಕೆ.ಇ.ಆರ್.ಸಿ [ಇ. ಎಸ್ & ಡಿ ಕೋಡ್] 2000-01 ರಲ್ಲಿಯ Section 30.07 ರ ಪ್ರಕಾರ ಹಣ ಭರಣ ಮಾಡಿಸಿಕೊಳ್ಳಬೇಕೆಂದು ತಿಳಿಸಿದರು.

II. ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಈ ಹಿಂದೆ General Manager [Technical], Corporate Office, Kaveri Bhavan, Bangalore ರವರ ಪತ್ರ ಸಂಖ್ಯೆ : KPTCL/ B11/ 3001/ 2001-02, Date : 02.05.2001 ರಲ್ಲಿ ಕ್ರಮ ಸಂಖ್ಯೆ : 01 ರಲ್ಲಿ "All the Power Sanction communicated prior to 29.03.2001, shall be processed as per old rules only" ಎಂದು ಇರುತ್ತದೆ. ಆದ್ದರಿಂದ ಶ್ರೀ. ಶಿವಯೋಗಿ. ವಿ. ಕೆರೂಡಿ ಇವರ ನೆಲ ಮಹಡಿ ಕಟ್ಟಡಕ್ಕೆ ಹಾಲಿ ಇರುವ 4 ಕಿ.ವ್ಯಾ ಸ್ಥಾವರಕ್ಕೆ ದಿನಾಂಕ : 15.04.1991 ರಲ್ಲಿ ವಿದ್ಯುತ್ ಸಂಪರ್ಕವನ್ನು ನೀಡಿದ್ದು, ಮೇಲಿನ ಪತ್ರದ ಪ್ರಕಾರ ಹೆಚ್ಚುವರಿಯಾಗಿ 16 ಕಿ.ವ್ಯಾ ವಿದ್ಯುತ್ ಪೂರೈಸಲು ಹಳೆಯ ನಿಯಮಾವಳಿಗಳು ಅನ್ವಯಿಸುವುದಾಗಿ ತಿಳಿಸಿದರು.

III. ಅರ್ಜಿದಾರರು ಇ. ಎಸ್ & ಡಿ ಕೋಡ್ 2000-2001 ರ ಪ್ರಕಾರ ಹಳೆ ಕಟ್ಟಡಕ್ಕೆ ಮತ್ತು ಹೊಸದಾಗಿ ನಿರ್ಮಿಸಿರುವ ಕಟ್ಟಡಕ್ಕೆ 9.08 ರ ಪ್ರಕಾರ ಪ್ರತ್ಯೇಕ ನಿಯಮಾವಳಿಗಳಿದ್ದು ಕೆ.ಇ.ಆರ್.ಸಿ ನಿಯಮಾವಳಿಯ ತಿದ್ದುಪಡಿಯಲ್ಲಿ ನಿಯಮ 9.08 ದಿನಾಂಕ : 29.11.2001 ರ ಪ್ರಕಾರ ತಳಮಹಡಿ ಆರ್. ಆರ್. ಸಂಖ್ಯೆ : 8650 ಕ್ಕೆ ದಿನಾಂಕ : 15.04.1991 ರಲ್ಲಿ ಸರ್ವಿಸ ಆಗಿರುವುದರಿಂದ ಹಳೆ ನಿಯಮಾವಳಿಗಳ ಪ್ರಕಾರ ಕ್ರಮ ಕೈಗೊಳ್ಳಲು ಮತ್ತು ಕೆ.ಇ.ಆರ್.ಸಿ [ಇ. ಎಸ್ & ಡಿ ಕೋಡ್] 2000-01 ರಲ್ಲಿಯ Section 30.07 ಅಂದರೆ ಈಗಿನ ಚಾಲ್ತಿಯಲ್ಲಿ ಇರುವ 3.1.1 ರ ಪ್ರಕಾರ ವಿದ್ಯುತ್ ಮಂಜೂರಾತಿ ನೀಡಬೇಕೆಂದು ಸಹ ಕೋರಿರುತ್ತಾರೆ.

## 3. <u>ಪ್ರತಿ ವಾದಿಯವರ ವಾದಗಳು</u> :-

ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ (ವಿ), ಕಾರ್ಯ & ಪಾಲನಾ ಉಪ-ವಿಭಾಗ-1, ಹೆಸ್ಕಾಂ, ರಾಣೇಬೆನ್ನೂರ ರವರ ವಾದಗಳು ಮತ್ತು ಅವರು ಸಲ್ಲಿಸಿರುವ ದಾಖಲೆಗಳು :-

I. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ (ವಿ), ಕಾರ್ಯ & ಪಾಲನಾ ಉಪ-ವಿಭಾಗ-1, ಹೆಸ್ಕಾಂ, ರಾಣೇಬೆನ್ನೂರ ರವರು ತಮ್ಮ ವಾದವನ್ನು ಮಂಡಿಸಿ, ಸದರಿ ಕಟಡ್ಡಕ್ಕೆ ಕೆ.ಇ.ಆರ್.ಸಿ ನಿಯಮಾವಳಿಯ ತಿದ್ದುಪಡಿಯಲ್ಲಿ ನಿಯಮ 9.08 [iv] – Note ನ್ನು ರದ್ದುಗೊಳಿಸಲಾಗಿದ್ದು, ಚಾಲ್ತಿ ನಿಯಮಾವಳಿಗಳಾದ 3.1.7 ಟಿಪ್ಪಣಿ 1 "ಡಿ" ಪ್ರಕಾರ 50 ಕಿ.ವ್ಯಾ ವರೆಗಿನ ಹೆಚ್ಚುವರಿ ವಿದ್ಯುತ್ ಭಾರಕ್ಕೆ ಪ್ರತಿ ಕಿ.ವ್ಯಾಗೆ ರೂ.6,500=00 ರಂತೆ ಹಾಗೂ 50 ಕಿ.ವ್ಯಾ ಮೇಲಿನ ಹೆಚ್ಚುವರಿ ವಿದ್ಯುತ್ ಭಾರಕ್ಕೆ ಪ್ರತಿ ಕಿ.ವ್ಯಾಗೆ ರೂ.13,000=00 ರಂತೆ, ಅಭಿವೃದ್ಧಿ ಶುಲ್ಕ ಮತ್ತು ಜಿ.ಎಸ್.ಟಿ ರೂಗಳನ್ನು ಭರಣಮಾಡಿಕೊಳ್ಳುವುದು ಹಾಗೂ ನಿಯಮಾನುಸಾರ ಅಧಿಕ ಠೇವಣಿ ಹಾಗೂ ಮಾಪಕ ಠೇವಣಿಯನ್ನು ಪಾವತಿಸುವಂತೆ ಕೆ.ಇ.ಆರ್.ಸಿ ನಿಯಮಾವಳಿಗಳ ಅನುಸಾರ ಕ್ರಮವನ್ನು ಜರುಗಿಸಿರುವುದು ಸರಿಯಾಗಿರುತ್ತೆ ಎಂದು ಪ್ರತಿವಾದವನ್ನು ಮಂಡಿಸಿರುತ್ತಾರೆ.

II. ಸದರಿ ಮೊತ್ತವನ್ನು ಗ್ರಾಹಕರು ಇಲ್ಲಿಯವರೆಗೆ ಭರಣ ಮಾಡಿರುವುದಿಲ್ಲ ಎಂಬುದನ್ನು ತಿಳಿಸಲಾಗಿದೆ.

<u>**ಸಲ್ಲಿಸಿದ ದಾಖಲೆಗಳು**</u> :-

1. ಹಣ ಭರಣ ಮಾಡಲು ತಿಳಿಸಿರುವ ಪತ್ರಗಳು.
2. ಗ್ರಾಹಕರ ಅರ್ಜಿ.
3. ಶಾಖಾಧಿಕಾರಿಗಳ ಸ್ಥಳ ಪರಿಶೀಲನಾ ವರದಿ.
4. ಇನ್ನಿತರೆ ದಾಖಲೆಗಳು.

## 4. <u>ಈ ವಿವಾದದಲ್ಲಿ ವೇದಿಕೆಯು ಉತ್ತರಿಸಬೇಕಾದ ವಿಷಯಗಳು</u> :-

I. Secretary, Karnataka Electricity Regulatory Commission, Bangalore ರವರ ತಿದ್ದುಪಡಿಯ ಅಧಿಸೂಚನೆಯ ಪತ್ರ ಸಂಖ್ಯೆ : Y/ 01/ 4, Date : 25.03.2005 ರಲ್ಲಿ ನಿಯಮ 9.08 ರದ್ದುಗೊಂಡಿರುವುದು ಸ್ಪಷ್ಟವಾಗಿ ನಮೂದಿಸಿರುವುದನ್ನು ಗಮನಿಸಿ, ಈಗ ಚಾಲ್ತಿಯಲ್ಲಿ ಇರುವ ಕೆ.ಇ.ಆರ್.ಸಿ ನಿಯಮಾವಳಿಗಳ ಪ್ರಕಾರ ಕ್ರಮ ಕೈಗೊಳ್ಳುವುದು ಸಮಂಜಸವಾದ ವಿಷಯವಾಗಿರುತ್ತದೆ ಎಂಬುದನ್ನು ಒಟ್ಟಾರೆ ಅಭಿಪ್ರಾಯವನ್ನು ಪಡೆಯಲಾಗಿದೆ.

II. General Manager [Technical], Corporate Office, Kaveri Bhavan, Bangalore ರವರ ಪತ್ರ ಸಂಖ್ಯೆ : KPTCL/ B11/ 3001/ 2001-02, Date : 02.05.2001 ರಲ್ಲಿ ನೀಡಿದ ಮಾರ್ಗ ಸೂಚಿಗಳನ್ವಯದಂತೆ "All the Power Sanction communicated prior to 29.03.2001, shall be processed as per old rules only" ಶ್ರೀ. ಶಿವಯೋಗಿ. ವಿ. ಕೆರೂಡಿ ಇವರ ನೆಲ ಮಹಡಿ ಕಟ್ಟಡಕ್ಕೆ ಹಾಲಿ ಇರುವ 4 ಕಿ.ವ್ಯಾ ಸ್ಥಾವರಕ್ಕೆ ದಿನಾಂಕ : 15.04.1991 ರಲ್ಲಿ ವಿದ್ಯುತ್ ಸಂಪರ್ಕವನ್ನು ನೀಡಿದ್ದು, ಈಗ ಚಾಲ್ತಿಯಲ್ಲಿರುವ ನಿಯಮಾವಳಿಗಳ ಪ್ರಕಾರ ಸದರಿ ಸ್ಥಾವರಕ್ಕೆ ಹೆಚ್ಚುವರಿಯಾಗಿ 16 ಕಿ.ವ್ಯಾ ವಿದ್ಯುತ್ ಪೂರೈಸಲು ಹಳೆಯ ನಿಯಮಾವಳಿಗಳು ಅನ್ವಯವಾಗುವುದಿಲ್ಲ ಎಂದು ಒಟ್ಟಾರೆಯಾಗಿ ಅಭಿಪ್ರಾಯಾವನ್ನು ಪಡಲಾಗಿದೆ.

III. Secretary, Karnataka Electricity Regulatory Commission, Bangalore ರವರ ತಿದ್ದುಪಡಿಯ ಅಧಿಸೂಚನೆಯ ಪತ್ರ ಸಂಖ್ಯೆ : Y/ 01/ 4, Date : 12.01.2006 ರಲ್ಲಿ ನಿಯಮ 3.1.7 Note-1 (D) In case of buildings serviced earlier to 25-8-2005, if the additional load for existing installations or additional installations under common mains is sought (with or without additional built up area) and if the total load inclusive of such additional load is more than the specified load already sanctioned as per ES & D Code, 2000-01, then in such cases the Licensee shall recover the expenditure towards the cost of electric line/plant for such additional loads only as stated below at appropriate slab rate :-

(a) Charges where the total load (existing+addinal load) Including additional load is more than 25 kW and up to and inclusive of 50 kW : - Rs. 6500/- per kW for additional load sought for.

(II) In other places : -

(i) Rs.6500/- per KW of additionalload up to a total load (existing+additional load) of 50KW.

(ii) Rs.13,000/- per KW of additional load for the total load (existing+additional load) exceeding 50 KW. ಈಗ ಚಾಲ್ತಿಯಲ್ಲಿ ಇರುವ ಈ ಮೇಲಿನ ಕೆ.ಇ.ಆರ್.ಸಿ ನಿಯಮಾವಳಿಗಳ ಪ್ರಕಾರ ಕ್ರಮ ಕೈಗೊಳ್ಳುವುದು ಸಮಂಜಸವಾದ ವಿಷಯವಾಗಿರುತ್ತದೆ ಎಂಬುದನ್ನು ಒಟ್ಟಾರೆ ಅಭಿಪ್ರಾಯವನ್ನು ಪಡೆಯಲಾಗಿದೆ.

## 5. <u>ಚರ್ಚೆ ಹಾಗೂ ವಿಶ್ಲೇಷಣೆಯಲ್ಲಿ ಕಂಡು ಬಂದ ಅಂಶಗಳು</u> :-

ಈ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಮತ್ತು ವಾದಿ ಹಾಗೂ ಪ್ರತಿವಾದಿಯವರ ಹೇಳಿಕೆಗಳನ್ನು ಆಲಿಸಿದ ನಂತರ ವೇದಿಕೆಯು ಈ ಕೆಳಕಂಡ ಅಂಶಗಳನ್ನು ಗಮನಿಸಿರುತ್ತದೆ :-

1. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹಳೆಯ ಇ. ಎಸ್ & ಡಿ ಕೋಡ್ ಪ್ರಕಾರ ಕೆಳಮಹಡಿಗೆ ಮಂಜೂರಾತಿ ನೀಡದ್ದು ಮತ್ತು ಮೊದಲನೇ, ಎರಡನೇ & ಮೂರನೇ ಮಹಡಿಗೆ ಕೆ.ಇ.ಆರ್.ಸಿ ಆಗಿನ ಚಾಲ್ತಿಯಲ್ಲಿ ಇರುವ ನಿಯಮಾವಳಿಗಳ ಪ್ರಕಾರ ಕ್ರಮಕೈಗೊಂಡಿದ್ದು ಇರುತ್ತದೆ.

2. Secretary, Karnataka Electricity Regulatory Commission, Bangalore ರವರ ತಿದ್ದುಪಡಿಯ ಅಧಿಸೂಚನೆಯ ಪತ್ರ ಸಂಖ್ಯೆ : Y/ 01/ 4, Date : 25.03.2005 ರಲ್ಲಿ ನಿಯಮ 9.08 ಕಂಡಿಕೆಯನ್ನು [Delete] ರದ್ದುಗೊಂಡಿರುವುದು ಸ್ಪಷ್ಟವಾಗಿ ನಮೂದಿಸಿರುವುದನ್ನು ಗಮನಿಸಿ, ಈಗ ಚಾಲ್ತಿಯಲ್ಲಿ ಇರುವ ಕೆ.ಇ.ಆರ್.ಸಿ ನಿಯಮಾವಳಿಗಳ ಪ್ರಕಾರ ಕೈಗೊಳ್ಳುವುದು ಸೂಕ್ತವಾಗಿರುತ್ತದೆ.
3. ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ ಹಾವೇರಿ ಅಧ್ಯಕ್ಷರು ಹಾಗೂ ಸದಸ್ಯರು ಈ ಕುರಿತು ಒಮ್ಮತದ ಅಭಿಪ್ರಾಯದೊಂದಿಗೆ ಆದೇಶ ಮಾಡಿರುತ್ತಾರೆ.

**ಆದೇಶ ಸಂಖ್ಯೆ : ಹಾ/ಗ್ರಾಕುಕೊನಿವೇ/ಪ್ರ.ಸಂ-02/CR-29/2022-23/** C45-175

**ದಿನಾಂಕ :** 3 NOV 2022

## ಆದೇಶ

1. ಈ ಕಛೇರಿಯ ಪತ್ರ ಸಂಖ್ಯೇ : 3288-91, ದಿನಾಂಕ : 27.07.2022 ರ ಪತ್ರಕ್ಕೆ ಅನುಗುಣವಾಗಿ ಸದರಿ ಸ್ಥಾವರಕ್ಕೆ 16 ಕಿ.ವ್ಯಾ ಹೆಚ್ಚುವರಿ ವಿದ್ಯುತ್ ಭಾರಕ್ಕೆ ರೂ.2,07,090=00 ಗಳನ್ನು ಹೆಚ್ಚುವರಿ ಅಭಿವೃದ್ಧಿ ಶುಲ್ಕ ಭರಣ ಮಾಡತಕ್ಕದ್ದು ಮತ್ತು ರೂ.29,770=00 ಹೆಚ್ಚುವರಿ ಆರಂಭಿಕ ಭದ್ರತಾ ಠೇವಣಿಯನ್ನು, ರೂ.178=00 ಮೇಲ್ವಿಚಾರಣಾ ಶುಲ್ಕವನ್ನು & ರೂ.296=00 ಎಲ್.ಟಿ.ರೇಟಿಂಗ್ ಶುಲ್ಕವನ್ನು [ಜಿ.ಎಸ್.ಟಿ ಮೊತ್ತವನ್ನು ಸೇರಿಸಿ] ಭರಣ ಮಾಡತಕ್ಕದ್ದು. ಸದರಿ ಸ್ಥಾವರಕ್ಕೆ ಸಿ.ಟಿ ಬಾಕ್ಸ್ & ಎಂ. ಎಸ್. ಬಿಲ್ಡಿಂಗ್ ಹಾಗೂ ಕೆ.ಇ.ಆರ್.ಸಿ ನಿಯಮಗಳನ್ನು ಪಾಲಿಸಲು ಸೂಚಿಸಿ, ಸಹಾಕಯ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾರ್ಯ & ಪಾಲನಾ ಉಪ-ವಿಭಾಗ-1, ಹೆಸ್ಕಾಂ, ರಾಣೇಬೆನ್ನೂರ ರವರಿಗೆ ದಿನಾಂಕ : 27.07.2022 ರ ಪತ್ರದಲ್ಲಿ ಆದೇಶಿಸಲಾಗಿದೆ.

2. General Manager[Technical], Corporate Office, Kaveri Bhavan, Bangalore ರವರ ಪತ್ರ ಸಂಖ್ಯೆ : KPTCL/ B11/ 3001/ 2001-02, Date : 02.05.2001 ರಲ್ಲಿ ನೀಡಿದ ಮಾರ್ಗ ಸೂಚಿಗಳನ್ವಯದಂತೆ ಈ ಪತ್ರದ ಬದಲಾಗಿ Secretary, Karnataka Electricity Regulatory Commission, Bangalore ರವರ ತಿದ್ದುಪಡಿಯ ಅಧಿಸೂಚನೆಯ ಪತ್ರ ಸಂಖ್ಯೆ : Y/ 01/ 4, Date : 12.01.2006 ರಲ್ಲಿ ನಿಯಮ 3.1.7 Note-1 (D) ರ ನಿಯಮಾವಳಿಗಳ ಪ್ರಕಾರ ಗ್ರಾಹಕರಿಗೆ ಹೆಚ್ಚುವರಿಯಾಗಿ 16 ಕಿ.ವ್ಯಾ ವಿದ್ಯುತ್ ಮಂಜೂರಾತಿ ಪಡೆಯಲು ಶುಲ್ಕ ಭರಣ ಮಾಡಲು ಈಗಾಗಲೇ ಪತ್ರದ ಮೂಲಕ ಸದರಿ ಗ್ರಾಹಕರಿಗೆ ತಿಳಿಸಿರುವುದು ಕ್ರಮಬದ್ಧವಾಗಿರುತ್ತದೆ. ಈ ಪ್ರಯುಕ್ತ ಸದರಿ ಪ್ರಕರಣವನ್ನು ಮುಕ್ತಾಗೊಳಿಸಲಾಗಿದೆ.

| | | |
|---|---|---|
| ಗುರುಬಸಪ್ಪ. ಎಸ್. ಮಾಗಾವಿ,<br>ಸದಸ್ಯರು, ಗ್ರಾ.ಕು.ಕೊ.ನಿ.ವೇ,<br>ಹಾವೇರಿ ವೃತ್ತ, ಹೆಸ್ಕಾಂ, ಹಾವೇರಿ. | ರೇಣುಕಾ. ಎಲ್. ತೆಂಬದ,<br>ಉಪ-ಲೆಕ್ಕನಿಯಂತ್ರಣಾಧಿಕಾರಿ ಹಾಗೂ<br>ಸದಸ್ಯರು, ಗ್ರಾ.ಕು.ಕೊ.ನಿ.ವೇ, ಹಾವೇರಿ<br>ವೃತ್ತ, ಹೆಸ್ಕಾಂ, ಹಾವೇರಿ. | ನಾಗಪ್ಪ. ಎಸ್. ಹೆಚ್,<br>ಅಧೀಕ್ಷಕ ಇಂಜಿನೀಯರ(ವಿ) ಹಾಗೂ<br>ಸದಸ್ಯರು, ಗ್ರಾ.ಕು.ಕೊ.ನಿ.ವೇ, ಹಾವೇರಿ<br>ವೃತ್ತ, ಹೆಸ್ಕಾಂ, ಹಾವೇರಿ. |

**ಪ್ರತಿಯನ್ನು ಅವಗಾಹನೆಗಾಗಿ/ ಮಾಹಿತಿಗಾಗಿ** :

1. ಮುಖ್ಯ ಇಂಜಿನೀಯರ(ವಿ), ಹುಬ್ಬಳ್ಳಿ ವಲಯ ಹೆಸ್ಕಾಂ, ಶಿವಗಂಗಾ ಕಾಲೋನಿ, ಕೇಶ್ವಾಪೂರ, ಕುಸಗಲ್ ರೋಡ್, ಹುಬ್ಬಳ್ಳಿ.
2. ಪ್ರಧಾನ ವ್ಯವಸ್ಥಾಪಕರು[ಆಡಳಿತ & ಮಾ.ಸಂ.ಅ], ನಿಗಮ ಕಛೇರಿ, ಹೆಸ್ಕಾಂ, ನವನಗರ ಹುಬ್ಬಳ್ಳಿ.
3. ಪ್ರಧಾನ ವ್ಯವಸ್ಥಾಪಕರು[ತಾಂತ್ರಿಕ], ನಿಗಮ ಕಛೇರಿ, ಹೆಸ್ಕಾಂ, ನವನಗರ, ಹುಬ್ಬಳ್ಳಿ.
4. ನಿಯಂತ್ರಣಾಧಿಕಾರಿಗಳು [ಕಂದಾಯ & ಲೆಕ್ಕಗಳು], ನಿಗಮ ಕಛೇರಿ, ಹೆಸ್ಕಾಂ, ನವನಗರ ಹುಬ್ಬಳ್ಳಿ-25.
5. ಉಪ-ಲೆಕ್ಕನಿಯಂತ್ರಣಾಧಿಕಾರಿಗಳು, ಕಾರ್ಯ & ಪಾಲನಾ ವೃತ್ತ, ಹೆಸ್ಕಾಂ, ಹಾವೇರಿ.
6. ಶ್ರೀ. ಗುರುಬಸಪ್ಪ. ಎಸ್. ಮಾಗಾವಿ, ಸಿ.ಜಿ.ಆರ್.ಎಫ್ ಸದಸ್ಯರು, ಹಾವೇರಿ.
7. ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾರ್ಯ & ಪಾಲನಾ ವಿಭಾಗ, ಹೆಸ್ಕಾಂ, ರಾಣೇಬೆನ್ನೂರ.
8. ಕಾರ್ಯನಿರ್ವಾಹಕ ಇಂಜಿನೀಯರ(ವಿ), ನಿಯಂತ್ರಣಾ ಆಯೋಗ ವ್ಯವಹಾರಗಳು, ಹೆಸ್ಕಾಂ, ನಿಗಮ ಕಛೇರಿ, ನವನಗರ ಹುಬ್ಬಳ್ಳಿ.
9. ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು[ತಾಂತ್ರಿಕ] ರವರ ಆಪ್ತ ಕಾರ್ಯದರ್ಶಿಗಳು, ನಿಗಮ ಕಛೇರಿ, ಹೆಸ್ಕಾಂ, ಹುಬ್ಬಳ್ಳಿ ರವರ ಮಾಹಿತಿಗಾಗಿ ಹಾಗೂ ಸದರಿ ವಿಷಯವನ್ನು ಮಾನ್ಯರ ಗಮನಕ್ಕೆ ತರಲು ಕೋರಿದೆ.
10. ಮಾನ್ಯ ಮುಖ್ಯ ಆರ್ಥಿಕ ಅಧಿಕಾರಿಗಳು/ ಮಾನ್ಯ ಮುಖ್ಯ ಆರ್ಥಿಕ ಅಧಿಕಾರಿಗಳು[ಆಂಪ], ರವರ ಆಪ್ತ ಕಾರ್ಯದರ್ಶಿಗಳು, ನಿಗಮ ಕಛೇರಿ, ಹೆಸ್ಕಾಂ, ಹುಬ್ಬಳ್ಳಿ ರವರ ಮಾಹಿತಿಗಾಗಿ ಹಾಗೂ ಸದರಿ ವಿಷಯವನ್ನು ಮಾನ್ಯರ ಗಮನಕ್ಕೆ ತರಲು ಕೋರಿದೆ.
11. ಆಪ್ತ ಕಾರ್ಯದರ್ಶಿಗಳು, ಓಂಬುಡ್ಸ್‌ಮನ್, ಕೆ.ಇ.ಆರ್.ಸಿ, 6 ಮತ್ತು 7 ನೇ ಮಹಡಿ, ಮಹಾಲಕ್ಷ್ಮೀ ಛೇಂಬರ್ಸ್, ನಂ 9/2, ಎಂ.ಜಿ. ರಸ್ತೆ, ಬೆಂಗಳೂರು. ಸದರಿ ಮಾಹಿತಿಯನ್ನು ಓಂಬುಡ್ಸ್‌ಮನ್, ಕೆ.ಇ.ಆರ್.ಸಿ, ಬೆಂಗಳೂರು ರವರ ದಯಾಪರ ಮಾಹಿತಿಗಾಗಿ ತರುವುದು.
12. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾರ್ಯ & ಪಾಲನಾ ಉಪ-ವಿಭಾಗ-1, ಹೆಸ್ಕಾಂ, ರಾಣೇಬೆನ್ನೂರ.
13. ಶ್ರೀ. ಶಿವಯೋಗಿ. ವಿ. ಕೆರೂಡಿ, ಕೆರೂಡಿ ಕಾಂಪ್ಲೆಕ್ಸ್, ಅಶೋಕ ವೃತ್ತ, ರಾಣೇಬೆನ್ನೂರ, ತಾ॥ ರಾಣೇಬೆನ್ನೂರ, ಜಿ॥ ಹಾವೇರಿ, ಪಿನ್ ಕೋಡ್ : 581115 ರವರ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ, **[ನೊಂದಣಿ ಅಂಚೆ & ಸ್ವೀಕೃತಿ ಮುಖಾಂತರ]**.
14. ಕಛೇರಿ ಕಡತ/ ಮಹಾ ಕಡತ.